Dec-26
T-P-2

R No KKNN 12

20-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi daily, Mysore 4

ಸತ್ಯವಾದಿ

ಸ್ಥಾಪಕರು ಅರಮನೆ ಹಿರಿಸ್ವಾಮಿದಾರ್ ಎಂ. ವಿ. ಸುಬ್ಬರಾವ್

ಸಂಪಾದಕರು ಧರ್ಮಪ್ರಚಾರಂನಿರತ ಎಂ. ಎಸ್. ಕೃಷ್ಣರಾವ್ [ತ ಪ,ಸ

ಪ್ರಧಾನರ ಬೇಟಿಗೆ ವಿರೋಧ

ಪ್ರಾಣಿಸಂಪತ್ತಿನ ರಕ್ಷಣೆ [ಪಾವೆಲ್ ಖರ್ಲಮೋವ್]

ಹಣದ ಹುಚ್ಚು ಹಿಡಿದ ಲಾಭದಾಸೆಯ ಬೇಟೆಗಾರರು ಪ್ರಾಣಿಗಳನ್ನು ಕೊಲ್ಲುತ್ತಲೇ ಇದ್ದರು ; ಚೂರು ದಯೆಯೂ ಇಲ್ಲದೆ, ಎಜೆಯಿಲ್ಲದ ಆಕೆಬುರುಕುತನದಿಂದ ಸೈಬೀರಿಯಾದಲ್ಲಿಯ ಕೃಷ್ಣಮೃಗಗಳನ್ನೂ, ಉತ್ತರ ಅಮೇರಿಕಾದಲ್ಲಿಯ ಮಹಿಷೆಗಳನ್ನೂ, ಏಷ್ಯಾದಲ್ಲಿಯ ಸೈಗಾ (ಬಯಲು ಜೀವಿಯ ಜಿಂಕೆ) ಗಳನ್ನೂ, ಆಫ್ರಿಕಾದಲ್ಲಿಯ ಸಿಂಹಗಳನ್ನೂ, ಆಸ್ಟ್ರೇಲಿಯಾದಲ್ಲಿಯ ಕಾಂಗರೂಗಳನ್ನೂ ಬೇಟೆಯಾಡುತ್ತಲೇ ಇದ್ದರು. ಏಕಪ್ರಕಾರವಾಗಿ ಗುಂಡಿನ ಮಳೆ ಸುರಿಸುವ ದೊಡ್ಡ ಬಂದೂಕದ ಹಿಂಸಾಚಕ್ತಿಯಿಂದ ಅವರು ಮತ್ತಗೊಂಡಿದ್ದರೆ, ನಿಸರ್ಗವು ಅಗಾಧ, ಅಕ್ಷಯ ವೆಂಬ ಸುಳ್ಳು, ಸುಳ್ಳೆಯಿಂದ ಅವರು ಮೂಢರೂ ಆಗಿದ್ದರು.

ಕೆಲವೊಂದು ಜಾತಿ ಪಶು ಹೋಗುವುದು ಮತ್ತು ಕೆಲವೊಂದು ಹೊಸ ಜಾತಿಗಳು ಕಾಣಿಸಿಕೊಳ್ಳುವುದು ಉತ್ಕ್ರಾಂತಿಯ ಮೂಲ ನಿಯಮವೆಂಬುದು ನಿಜ; ಸಹಸ್ರ ಸಹಸ್ರಾರು ವರ್ಷಗಳು ಹಿಡಿಯುವ ಅತ್ಯಂತ ಸಿಧಾನತಮಗತಿಯ ಪ್ರಕ್ರಿಯೆ ಇದು. ಆದರೆ ಮನುಷ್ಯನು ವನ್ಯಜೀವಿಗಳ ಪ್ರಪಂಚದ ಮೇಲೆ ಅತಿಕ್ರಮಣ ನಡೆಸಿದಾಗ ಮಾತ್ರ ಅವು ಅತ್ಯಂತ ವಿನಾಶಕಾರಿ ವೇಗದಲ್ಲೇ ಕಣ್ಮರೆಯಾಗತೊಡಗುತ್ತವೆ. ಕಮೋಡೊರ್ ನಡುಗಡ್ಡೆಗಳ ಅಗ್ರಗಾಮಿಗಳಿಗೆ, ಕಂಬಾಳಿ ಜಲದಲ್ಲಿ ಶಾಂತವಾಗಿ "ಪೀಕ್ಯಾಬೇಜ್" ವನ್ನು ಮೇಯುತ್ತಾ ಕಾಲಕಳೆಯುತ್ತಿದ್ದ ನಿರುಪದ್ರವಿ ಸ್ಟೆಲ್ಲಾರ್ಸ್ "ಸಮುದ್ರ ಹಸು"ಗಳನ್ನು ನಿರ್ನಾಮ ಮಾಡಲು 30 ವರ್ಷಗಳು ಸಾಕಾದವು.

ಮನುಷ್ಯನು ಸದಾ ಕಾಲವೂ ಪ್ರಾಣಿಗಳ ಜೀವನದಲ್ಲಿ ನೇರವಾಗಿಯೇ ಹಸ್ತಕ್ಷೇಪ ನಡೆಸುತ್ತಾನೆ ; ಅಥವಾ ಇದ್ದಕ್ಕಿಂತ ಬುದ್ಧಿವಂತಿಕೆಯಾದ ಅವುಗಳನ್ನು ರಕ್ಷಿಸಿಡುತ್ತಾನೆ. "ಮನುಷ್ಯ ಒತ್ತಡವೂ ಅಪರೋಕ್ಷವಾಗಿ ಪ್ರಾಣಿಗಳ ಮೇಲೆ ಭಾರವನ್ನು ಬೀಳಿಸಬಹುದು. ಆದರೆ ಮಾನವನ ಆರ್ಥಿಕ ಚಟುವಟಿಕೆಗಳು ಜವುಗಳ ಇಕ್ಕೆಯ ಸ್ಥಿತಿಗತಿಗಳನ್ನು ಕೂಡ ಇದ್ದಂತೆ ಮಾಡುತ್ತವೆ. ಭೂಮಿಯ ಮೇಲೆ ಒಂದು ಹೊಸ ನಿಸರ್ಗ ದೃಶ್ಯವು ಕಾಣಿಸಿಕೊಳ್ಳುತ್ತದೆ. ಇದು ಸ್ಪಷ್ಟ, ಸಹಜ, ತರ್ಕಬದ್ಧ ಮತ್ತು ಅನಿವಾರ್ಯವೆ ಆದರೆ ಪ್ರಾಣಿ ಜಗತ್ತು ರಕ್ಷಿಸಲ್ಪಡಬೇಕೆ ಎಂಬುದು ಮಾನವ ಸಂಕಲ್ಪ ಶಕ್ತಿಯನ್ನೇ ಅವಲಂಬಿಸಿದೆ. ಆದರೆ ಮತಿಹೀನತೆಯಿಂದ ಅವುಗಳ ವಂಶಗಳನ್ನು ನಷ್ಟಪಡಿಸುವುದಕ್ಕಿಂತಲೂ ಅವುಗಳನ್ನು ರಕ್ಷಿಸಿಡುವ ಸಂತತಿಯನ್ನು ಪುನರುಜ್ಜೀವಿಸುವ ಮನುಷ್ಯ ಸಹಸ್ರ ಸಹಸ್ರ ಪಾಲು ಕಠಿಣವೆಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳೋಣ.

★

ಕಬೀರ ವಾಣಿ

ಸಾಧು ಗಾಂತನ ಬಾಂಧಿಯೆ, ಉದಕವಮಾತ್ರ ಲೇಯ್ ।
ಆಗೇ ಪೀಛೇ ಹರಿ ಖಡೇ, ಜಖಮಾಂಗೇ ತಬಡೇಯ್ ॥

ಸಾಧು ತನ್ನ ಗಂಟೆನಲ್ಲಿ ಏನನ್ನೂ ಕಟ್ಟುವುದಿಲ್ಲ (ಯಾವ ವಸ್ತುವನ್ನೂ ನೊದಲೇ ಸಂಗ್ರಹಿಸಿ ಇಟ್ಟುಕೊಳ್ಳುವುದಿಲ್ಲ). ಅವನು ತನ್ನ ಉದರ ಪೋಷಣೆಗೆ ಅಗತ್ಯವಿರುವಷ್ಟನ್ನೇ ತೆಗೆದುಕೊಳ್ಳುತ್ತಾನೆ. ಅವನ ಹಿಂದೆಯೂ ಮುಂದೆಯೂ ಮುಂದಿಯೂ ದೇವರು ನಿಂತುಕೊಂಡಿರುವುದರಿಂದ ಸಾಧುವು ಬೇಡದ ಕೂಡಲೆ. ಅವನಿಗೆ ದೇವರು ಕೊಡುತ್ತಾನೆ.

ಪಾರ್ಲಿಮೆಂಟು ವಿಸರ್ಜನೆ, ರಾಜ್ಯಾಂಗ ತೆಗೆದುಹಾಕಲು ಕೇಳಿಕೆ

ಹೈದರಾಬಾದು— ಪ್ರಸ್ತುತ ಸಮಸ್ಯೆಗಳನ್ನು ಈಗಿರುವ ರದ್ದತಿ ಪರಿಹರಿಸಲು ವಿಫಲಗಗೊಂಡಿರುವುದರಿಂದ, ಪಾರ್ಲಿಮೆಂಟನ್ನು ವಿಸರ್ಜಿಸಿ, ರಾಜ್ಯಾಂಗವನ್ನು ತೆಗೆದುಹಾಕಿ, ಕೊಸರಾಜ್ಯಾಂಗ ನಿರ್ಮಿಸಲು ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿ ಏರ್ಪಡಿಸಲು ಅಗತ್ಯನೆಂದು ಹೋಸಲಿಸ್ಟ್ ಪಾರ್ಟಿ ಅಧ್ಯಕ್ಷ ಶ್ರೀ ಜಾರ್ಜ್ ಫರ್ನಾಂಡಿಸ್ ಪತ್ರಿಕೆಯವರಿಗೆ ತಿಳಿಸಿದರು.

★

ಅಕ್ಕಿ ವಲಯ

ನವದೆಹಲಿ— ದಕ್ಷಿಣದಲ್ಲಿ ಒಂದು ಅಕ್ಕಿ ವಲಯ ನಿರ್ಮಿಸಿಕೊಳ್ಳುವುದು ಅಲ್ಲಿಯ ರಾಜ್ಯಗಳ ನಿರ್ಧಾರಕ್ಕೆ ಸೇರಿದುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

★

ಮೆಣಸು

ಮಡಕೇರಿ— ಚಿಟಿಹಳ್ಳಿಯಲ್ಲಿ ಮೆಣಸಿನ ಬೆಳೆ ಎಕ್ರೆಗೆ 1500 ಕೆಜಿಗಳಾಗಿದ್ದು, ದಾಖಲಾಗಿ ಸುಗ್ಗಿಯಾಗಿದೆ; ಮೆಣಸು ಕೆಜಿಗೆ ರೂ. 10 ಇದ್ದು ಎಕ್ರೆಗೆ ರೂ. 15000 ದೊರೆತಂತಾಗಿದೆ.

ಅಂಚೇಕಾರ್ಡು !

ನವದೆಹಲಿ— ಅಂಚೇಕಾರ್ಡ ಬೆಲೆ ಏರಿಕೆ ತಪ್ಪುವಂತಿಲ್ಲ.

ಪ್ರಧಾನಿಯವರ ಬೇಟಿಗೆ ಅಡ್ಡಿ

ಪೂನಾ— ಪ್ರಧಾನಿಯವರು ಇಲ್ಲಿಗೆ ಏಪ್ರಿಲು 6 ರಂದು ಬೇಟಿ ಕೊಡಲಿರುವುದನ್ನು ಅಡ್ಡಿಪಡಿಸಲು ಕಾಂಗ್ರೆಸ್ಸೇತರ ಪಕ್ಷಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ — ನಗರದ ಮೇಯರ್ರವರು ಈ ಸಮಿತಿಯ ಅಧ್ಯಕ್ಷರು

★

ಸಾಕ್ಷಿಗೆ ಜುಲ್ಮಾನೆ

ರಾಜಕೋಟೆ— ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಸಾಕ್ಷ್ಯ ನುಡಿದನಂತರ ಕೋರ್ಟಿನಲ್ಲಿ ಬೀಡಿ ಸೇದಿದ್ದಕ್ಕಾಗಿ ಅವನಿಗೆ ರೂ. 20 ಜುಲ್ಮಾನೆ ಹಾಕಲಾಯಿತು — ಕೋರ್ಟಿನಲ್ಲಿ ವಿಚ್ಛೇದೆಲೆ ಅಗಿಯುತ್ತಿದ್ದ ಇನ್ನೊಬ್ಬನಿಗೆ ರೂ 2 ಜುಲ್ಮಾನೆ ಹಾಕಲಾಯ್ತು

★

ಸುಖೀ ರಾಜ್ಯ

ಬೆಂಗಳೂರು— ಸರ್ಕಾರಿ ಹಣದ ಹೆಚ್ಚು ಭಾಗ ಅಧಿಕಾರಿಗಳ ಸಂಬಳಕ್ಕಾಗಿ ಹೋಗುತ್ತಿದ್ದು "ಸುಖೀರಾಜ್ಯ" ಭಾವನೆ ಸರಕಾರಿ ನೌಕರರ ಕಲ್ಯಾಣಕ್ಕಾಗಿದೆ ಎಂದು ಶಾಸನಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಹೇಳಿದರು.

★

ಪ್ರಮಾಣ ವಚನ ಸ್ವೀಕಾರಕ್ಕೆ ತಿರಸ್ಕಾರ

ಲಕ್ನೊ— ಉತ್ತರ ಪ್ರದೇಶದ ಶಾಸನಸಭೆಯ ಆಗ್ರಾದ ಏಕಮಾತ್ರ ಸದಸ್ಯ ಶ್ರೀ ಮಹಮದ್ ಅಯಾಬ್ರವರು ಪ್ರಮಾಣ ವಚನ ಸ್ವೀಕರಿಸಲು ತಿರಸ್ಕರಿಸಿದರು — ಕಾರಣ, ಅದು ಹಿಂದಿಯಲ್ಲಿ ಮುದ್ರಿತವಾಗಿರುವುದೆಂದೂ, ತನ್ನ ಇಚ್ಛೆಯ ಉರ್ದುವಿನಲ್ಲಿರುವುದೆಂದೂ ಹೇಳಿದರು.

ರೂ 1 ಕೋಟಿ ಪುಸ್ತಕಗಳ ಮಾರಾಟವಿಲ್ಲ

ನವದೆಹಲಿ— ರೂ 1 ಕೊಟಿಗಿಂತ ಹೆಚ್ಚು ಬೆಲೆಯ ಪುಸ್ತಕಗಳು ಸಾಹಿತ್ಯ, ಲಲಿತ ಕಲಾ ಇತ್ಯಾದಿ ಸಂಸ್ಥೆಗಳಲ್ಲಿ ಮಾರಾಟವಾಗದೆ ಬಿದ್ದಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು.

ಪಂಚಾಂಗ ಸ್ವೀಕಾರ

ಜ್ಯೋತಿಷ್ಯ ಶಿರೋಮಣಿ, ಇತ್ಯಾದಿ ಅನೇಕ ಬಿರುದಾಂಕಿತರಾದ, ಅಸ್ಥಾನ ಮಹಾ ವಿದ್ವಾನ್ ಶ್ರೀ ಸಂಪತ್ಕೃಷ್ಣ ಜೋಯಿಸರವರ ಪುತ್ರರು, ಜೋತಿಷ, ಧರ್ಮಶಾಸ್ತ್ರ ವಿದ್ವಾನ್ ಶ್ರೀ ನ. ಕೃಷ್ಣಜೋಯಿಸರಿಂದ ಗುಣಿಸಲ್ಪಟ್ಟು ಪರಿಶೋಧಿಸಲ್ಪಟ್ಟರುವ ಆನಂದ ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಸ್ವೀಕರಿಸಿದ್ದೇವೆ. ಇವರಲ್ಲಿ ದಿನ ನಿತ್ಯ ತಿಳಿಯಬೇಕಾದ ಅನೇಕ ಜ್ಯೋತಿಷ್ಯ ವಿಷಯಗಳೂ, ರಾತಿಗಳ ಗೋಚಾರ ಫಲ, ವಿವಾಹೋಪನಯನ ಲಗ್ನಗಳೂ, ರಥೋತ್ಸವಗಳೂ ಮುಂತಾದ ವುಗಳೂ ಇದ್ದು, ಮನೆಯಲ್ಲಿ ಒಬ್ಬ ಪುಟ್ಟ ಜೋಯಿಸರೇ ಇದ್ದಂತಿದೆ.

5000 ವರ್ಷಗಳ ಹಿಂದೆಯೇ ಗೊತ್ತಿತ್ತು

ನವದೆಹಲಿ — ಈಗಿನ "ವಿಾಟರ್" ಅಳತೆಗೆ ಸಾಮಿಾಪ್ಯವಾದ ಅಳತೆ ವಿಜಾ ಯವು 5000 ವರ್ಷಗಳ ಹಿಂದೆಯೂ ಸಿಂಧೂ ಕಣಿವೆ ನಾಗರೀಕತೆಗೆ ಗೊತ್ತಿದ್ದಿತೆಂದು ವಿಜ್ಞಾನ ದಳದ ಅಧಿಕಾರಿ ಶ್ರೀ ಬ್ರಿಜ್ ಭೂಷಣರು ಹೇಳಿರುವರು.

ಮಂಗಳ ಗ್ರಹ

ನವದೆಹಲಿ— ಮಂಗಳ ಗ್ರಹದ ಮೇಲಣ ಭಾಗದಲ್ಲಿ ಒಣಗಿದ ನದಿ ದಡಗಳ ಕಾಣಬಂದಿರುವುದೆಂದು ರಷ್ಯಾ ವಿಜ್ಞಾನಿಗಳ ಅಭಿಪ್ರಾಯವಾಗಿದೆ.

ಜನಸಂಖ್ಯೆ

ವಿಶ್ವಸಂಸ್ಥೆ — 1972 ರ ಮಧ್ಯದಲ್ಲಿ ವಿಶ್ವದ ಜನಸಂಖ್ಯೆ 76 ಬಿಲಿಯ ಹೆಚ್ಚು, ಪಾಕಿಲಾತಿ 3782 ಮಿಲಿಯ ಜನರಿದ್ದರು.

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fund

SHAKTI

SUDHA

A Superb Tonic

Help The Gorakshana

— HumanitarianPropoganda Monthly ....

ವುಡ್‌ಲಾಂಡ್ 22 3 74 ರಿಂದ

ಅಮೋಘ 4 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಸ್ಯಾಮ್, ನವೀನ್ ನಿಶ್ಚಲ್, ಕೇಜಿ

ದಿನ ೩ ಪ್ರದರ್ಶನಗಳು

★

ಅಪೆರಾ 22 3 74 ರಿಂದ

ಜೀನಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಕಲರ್ ತಮಿಳು ಚಿತ್ರ

ಪಾತ್ರ — ಜೆಮಿನಿ ಗಣೇಶ್ ಸುಂದರರಾಜ್ ನಿರ್ಮಲ ನಂಬಿಯಾರ್

೨ ಪ್ರದರ್ಶನಗಳು

ಭಾರತದ್ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore